




# ಗುಡಿಸಿಲಿನ ದಯಾಳು ಚಮ್ಮಾರ


ಕಥೆ: ಸ್ವಾಮಿ ವಿಮೂರ್ತಾನಂದ    ಚಿತ್ರ : ಶಿವಪ್ರಸಾದ್

ಒಂದು ಸಲ ಸ್ವಾಮಿ ವಿವೇಕಾನಂದರು ಖೇತ್ರಿಗೆ ಹೋಗಿದ್ದರು. ಅವರ ಬಳಿಗೆ ಹಲವು ಬಗೆಯ ಜನರು ಬಂದು ಆಧ್ಯಾತ್ಮಿಕ ವಿಚಾರಗಳನ್ನು ಕೇಳಿ ತಿಳಿಯುತ್ತಿದ್ದರು.





4
ಜನರು ಅವರ ಬಳಿಗೆ ಬಂದು, ಮೂರು ದಿನ ಹಗಲು, ರಾತ್ರಿ ಅವರು ಸತತವಾಗಿ ಮಾತನಾಡುವಂತೆ ಮಾಡಿದರು. ಒಬ್ಬ ಚಮ್ಮಾರ ಮೂರು ದಿನಗಳಿಂದ ಅವರನ್ನು ಗಮನಿಸುತ್ತಿದ್ದ...
ನಿಜಕ್ಕೂ ಇವರು ದೊಡ್ಡಯೋಗಿಗಳೇ ಇರಬೇಕು. ಇಲ್ಲದಿದ್ದರೆ ಮೂರು ದಿನಗಳಿಂದ ಅನ್ನಾಹಾರವಿಲ್ಲದೆ ಯಾರು ಹೀಗೆ ಮಾತನಾಡಬಲ್ಲರು?
5
ಮೂರನೇ ದಿನ ರಾತ್ರಿಯ ಹೊತ್ತಿಗೆ, ಎಲ್ಲ ಜನರೂ ಹೊರಟು ಹೋದ ಮೇಲೆ ಆ ಚಮ್ಮಾರನು ಸ್ವಾಮೀಜಿಯವರ ಬಳಿಗೆ ಹೋಗಿ ಕೇಳಿದ...
ಸ್ವಾಮೀಜಿ, ಕಳೆದ ಮೂರು ದಿನಗಳಿಂದ ನೀವು ಅನ್ನ, ನೀರು ಏನನ್ನೂ ಸೇವಿಸಲಿಲ್ಲ. ನಿಮಗೆ ತುಂಬಾ ಆಯಾಸ, ಹಸಿವೆ ಆಗಿರಬೇಕಲ್ಲ?
ಅವನ ಅನುಕಂಪ ಸ್ವಾಮೀಜಿಯವರನ್ನು ಕಲಕಿತು.
6
ಈ ಬಡ ಚಮ್ಮಾರನಂಥವರಿಂದ ಆಧ್ಯಾತ್ಮಿಕತೆ ಹೆಚ್ಚಾಗುವುದು. ಎಲ್ಲರೂ ನನ್ನಿಂದ ಏನನ್ನೋ ನಿರೀಕ್ಷೆ ಮಾಡುತ್ತಿದ್ದರೆ, ಈ ವಿಶಾಲ ಹೃದಯದ ವ್ಯಕ್ತಿ ನನಗೆ ಏನನ್ನೋ ಕೊಡಲು ಬಂದಿದ್ದಾನೆ.
7
ನೀನು ತೋರಿದ ಸಹಾನು-ಭೂತಿಗಾಗಿ ಕೃತಜ್ಞತೆಗಳು. ನನಗೆ ತಿನ್ನುವುದಕ್ಕೆ ಆಹಾರ ನೀಡಬಲ್ಲೆಯಾ? ನೀನು ಬೇಯಿಸಿದ ಆಹಾರ ಸ್ವೀಕರಿಸಲು ನನಗೆ ಯಾವ ಅಭ್ಯಂತರವೂ ಇಲ್ಲ.
ಸ್ವಾಮೀಜಿ, ನಾನು ಚಮ್ಮಾರ. ಸಾಧುಗಳಿಗೆ ನಾನು ಆಹಾರ ಕೊಟ್ಟರೆ ನನ್ನನ್ನು ಈ ರಾಜ್ಯದಿಂದ ಹೊರಗಟ್ಟುವರು. ನಿಮಗೆ ಬೇಕಾದರೆ ನಾನು ಒಂದಿಷ್ಟು ಗೋಧಿಹಿಟ್ಟು ಕೊಡಬಲ್ಲೆ. ನೀವೇ ಬೇಯಿಸಿಕೊಳ್ಳಿ.


8
ಹೆದರಬೇಡ. ನಿನಗೇನೂ ತೊಂದರೆಯಾಗದು. ನೀನು ಕೊಟ್ಟ ಆಹಾರವನ್ನು ನಾನು ಸಂತೋಷದಿಂದ ಸ್ವೀಕರಿಸುತ್ತೇನೆ.
9
ಚಮ್ಮಾರ ತನ್ನ ಮನೆಗೆ ಹೋದ.
10
ಆ ಸಾಧುಗಳು ಮೂರು ದಿನಗಳಿಂದ ಅನ್ನ, ನೀರು ಮುಟ್ಟಿಲ್ಲ. ನಾವು ಬೇಯಿಸಿದ ಆಹಾರವನ್ನು ಅವರು ತಿನ್ನುವರಂತೆ. ಆದರೆ ರಾಜ ನಮ್ಮನ್ನು ಓಡಿಸಿಯಾನು ಎಂದು ನನಗೆ ಭಯ..
ನಾವೇಕೆ ಹೆದರಬೇಕು? ಒಬ್ಬರು ಸಾಧುಗಳಿಗೆ ಆಹಾರ ಕೊಟ್ಟಿದ್ದಕ್ಕಾಗಿ ನಮಗೆ ಶಿಕ್ಷೆ ನೀಡಿದರೂ ಅದರಿಂದ ತೊಂದರೆಯಿಲ್ಲ. ನಾವು ಅದನ್ನು ಸಂತೋಷದಿಂದ ಸ್ವೀಕರಿಸೋಣ.
11
ಆ ಬಡ ದಂಪತಿಗಳು ಸ್ವಾಮೀಜಿಗೆ ಆಹಾರ ನೀಡಿದರು.
ನೀವು ಶುದ್ಧವಾದ ಪ್ರೀತಿಯಿಂದ ನೀಡಿದ ಈ ಆಹಾರ, ದೇವತೆಗಳು ನೀಡುವ ಅಮೃತಕ್ಕಿಂತಲೂ ಉತ್ತಮವಾದುದು.
ಸ್ವಾಮೀಜಿ, ರಾಜನು ಶಿಕ್ಷೆ ನೀಡುವ ಭಯ ನಮಗಿಲ್ಲ. ನಮ್ಮ ಮೇಲೆ ನಿಮ್ಮ ಕೃಪೆ ಇದ್ದರೆ ಸಾಕು.
12
ಸ್ವಾಮೀಜಿ ಆ ದಂಪತಿಗಳನ್ನು ತುಂಬು ಹೃದಯದಿಂದ ಹರಸಿದರು. ಕೆಲವು ದಿನಗಳ ನಂತರ ಖೇತ್ರಿಯ ರಾಜನಿಗೆ ಸ್ವಾಮೀಜಿ ಬಂದಿರುವ ವಿಚಾರ ತಿಳಿಯಿತು.
ಅವನು ಸ್ವಾಮೀಜಿಯವರನ್ನು ತನ್ನ ಅರಮನೆಗೆ ಆಹ್ವಾನಿಸಿದ.


13
ಅರಮನೆಯಲ್ಲಿ ಸ್ವಾಮೀಜಿ ರಾಜನಿಗೆ ದಯಾಳುವಾದ ಚಮ್ಮಾರನ ಕಥೆಯನ್ನು ವಿವರಿಸಿದರು.
ಆಹ! ಅಂಥ ಮಹಾತ್ಮರಿಂದಲೇ ಕಾಲಕಾಲಕ್ಕೆ ಮಳೆಯಾಗುತ್ತಿದೆ, ಧರ್ಮವು ಸುರಕ್ಷಿತವಾಗಿದೆ. ಅವನ ದಯೆಗಾಗಿ ಅವನನ್ನು ಸತ್ಕರಿಸಬೇಕು. ಅದಕ್ಕೆ ಬೇಕಾದ ಏರ್ಪಾಡು ಮಾಡುತ್ತೇನೆ, ಸ್ವಾಮೀಜಿ.
14
ಮುಂದೆ ರಾಜನು ಆ ಚಮ್ಮಾರನನ್ನು ತನ್ನ ಅಸ್ಥಾನಕ್ಕೆ ಕರೆಸಿದ...
ನೀನು ಚಮ್ಮಾರನಲ್ಲವೆ? ನಮ್ಮೊಂದಿಗೆ ಬಾ. ನಿನ್ನನ್ನು ರಾಜನ ಬಳಿಗೆ ಕರೆದುಕೊಂಡು ಹೋಗಲೆಂದೇ ನಾವು ಬಂದಿರುವುದು.
ಅಯ್ಯೋ! ರಾಜ ನನ್ನನ್ನು ಕರೆಸಿಕೊಳ್ಳುತ್ತಿದ್ದಾನೆ! ನಾನೇನೂ ಅಪರಾಧ ಮಾಡಿಲ್ಲ!
15
ಚಮ್ಮಾರ ಗೊಂದಲಕ್ಕೀಡಾದ... ಆದರೂ ರಾಜನ ಆಸ್ಥಾನಕ್ಕೆ ಹೋದ. ಅವನಿಗೆ ಆಶ್ಚರ್ಯವಾಯಿತು, ರಾಜ ಎದ್ದು ನಿಂತು ಅವನನ್ನು ಆದರದಿಂದ ಬರಮಾಡಿಕೊಂಡ...
ಸ್ವಾಮೀಜಿ ಹಸಿದಿದ್ದಾಗ ನೀನು ಅವರಿಗೆ ಆಹಾರ ನೀಡಿದೆ. ಇದರಿಂದ ನನಗೆ ಬಹಳ ಸಂತೋಷವಾಗಿದೆ. ನೀನು ತೋರಿದ ದಯೆಗೋಸ್ಕರ ಈ ಉಡುಗೊರೆ... ಇದನ್ನು ತೆಗೆದುಕೋ.
ಬಡ ಚಮ್ಮಾರನು ಆಶ್ಚರ್ಯಗೊಂಡ, ಅಷ್ಟೇ ಆನಂದಗೊಂಡ. ಸ್ವಾಮೀಜಿ ಅವನನ್ನು ಹರಸಿದರು.